	ರೂ.	ಆ.
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ)	2	8
ಎರಡನ್ನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	1	4

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 347ನೇ ಸೆಕ್ಷರ್ಷ ಅನುಸರಿಸಿ ದಿವಾಳೀ ಅಪ್ಲಿಕೇಷರ್ಷಗಳ ಬಗ್ಯೆ ನೋಟಿಸುಗಳಿಗೆ :—

ಮೊದಲನೇ ಸಲಕ್ಕೆ	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 354ನೇ ಸೆಕ್ಷರ್ಷಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.

ಡ್ಯೂಪ್ಲಿಕೇಟ್ ಕಾಫೀ ಪಟ್ಟೆ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸುಗಳಿಗೆ :—

ಮೊದಲನೇ ಸಲಕ್ಕೆ	ಪುಟ 1ಕ್ಕೆ	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	„	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಜ್ತಿ 1ಕ್ಕೆ	..	0	8
ಎರಡನೇ ದಫಾ	ಡಿಟೋ	ಡಿಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	..	..	0	4

ಪರಾ —ಚಂದಾ ವಗೈರೇ ಬಗ್ಯೆ ಸ್ಲೋಸ್ಟೇಜ್ ಲೇಬಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ವಂದಾಣಿ ಯಂತೆ ಜಾಸ್ತೀ ಲೇಬಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ಮೆಂಟ್ ಆರ್ಡರ್ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರು ಗವರ್ಮೆಂಟ್ ಆಯಾ ಇಲಾಖೆ ಸೆಕ್ರೆಟೆರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದ್‌ಗಳು ಇದರಡಿ ರುಜೂ ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸು ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ಟು ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ನ 12 ಘಂಟೆ ಒಳಗಾಗಿ ಕಂಪೈಲರ್ ಆಫಿಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಯಿಲ್ಲ.

ಟಿ. ಟಿ. ಲೆನಾರ್ಡ್,
ಮೈಸೂರ ಗೆಜೆಟ್ ಕಂಪೈಲರ್.

ಸ್ವಂತ ಪ್ರಕಟನೆ.

ನೋಟಿಸ್.

ನಗರ ಡಿವಿಜ್ ಡಿಸ್ಟ್ರಿಕ್ಟು ಜಡ್ಜ್‌ರವರಿಂದ 1895ನೇ ಇಸವಿ ಡಿಸೆಂಬರ್ ತಾರೀಖು 13ರಲ್ಲಿ ಮಾಡಲ್ಪಟ್ಟ ಹುಕುಂ ಅನುಸರಿಸಿ, ಲೇಟ್ ಮೆಸ್ಟರ್ ಅಂಬಿನಕೋಡಿಗೆ ರಂಗಯ್ಯ ಹೆಬ್ಬಾರ್‌ರವರ ಆಸ್ತಿಗಳನ್ನೆಲ್ಲಾ ಅವರ ಮಗ ವೈನರ್ ಜಯಗಣಪತಿ ಹೆಬ್ಬಾರರಿಗಾಗಿ ನಾನು ವೈವಾಟು ನೋಡುವ ಬಗ್ಯೆ ಮ್ಯಾನೇಜರಳಾಗಿ ಕ್ರಮವರಿತು ಮೊಕರರ್ ಮಾಡಲ್ಪಟ್ಟ್ಯು ಇರುವದರಿಂದ ಈ ಮೂಲಕ ಸಮಸ್ತರಿಗೂ ನಾನು ತಿಳಿಯಪಡಿಸುವದೇನಂದರೆ,

ಮೇಲ್ಕಂಡ ಕೋರ್ಟು ಹುಕುಂ ಪ್ರಕಾರಕ್ಕೆ ಸದರೀ ಲೇಟ್ ಮೆ॥ ರಂಗಯ್ಯ ಹೆಬ್ಬಾರರ ಯಲ್ಲಾ ಸ್ಥಿರಚರ ಆಸ್ತಿಗಳ ಸ್ವಾಧೀನವು ಅವರ ಕುಮಾರ ಮೈನರ್ ಸದರೀ ಜಯಗಣಪತಿ ಹೆಬ್ಬಾರನಿಗೋಸ್ಕರ ನನ್ನ ಸ್ವಾಧೀನಕ್ಕೆ ಬಳಪಟ್ಟು ಪ್ರಯುಕ್ತ ಸದರೀ ಲೇಟ್ ಮೆ ರಂಗಯ್ಯ ಹೆಬ್ಬಾರರವರ ಆಸ್ತಿಗೆ ಸಲ್ಲಬೇಕಾದ ಹಣ ಕಾಸು ಜಿನಸು ವ್ಯಾಲು ವಗೈರ ಸಮಸ್ತ ಪದಾರ್ಥಗಳನ್ನ ಈ ತಾರೀಖು ಲಾಗಾಯತು ಆರು ವಾರಗಳ ಒಳಗಾಗಿ ನಮಗೆ ಪಾವತಿ ಮಾಡಿ ನಮ್ಮಿಂದ ಕ್ರಮವಾದ ರಕೀತಿ ಪಡಿಯಬೇಕು. ಹಾಗಿಲ್ಲವಾದರ ಬೇರೇ ನೋಟಿಸು ಕೊಡದೆ ಸದರೀಯವರ ಆಸ್ತಿಗೆ ಸಲ್ಲಬೇಕಾದ ಯಲ್ಲಾ ಹಣ ಕಾಸು ಜಿನಸಿ ಫಸಲು ವಗೈರೆ ಸಮಸ್ತ ಪದಾರ್ಥಗಳನ್ನ ಬರಮಾಡಿಕೊಳ್ಳಲು ನ್ಯಾಯಸ್ಥಾನಗಳಲ್ಲಿ ವ್ಯವಹರಣೆ ನಡಿಸಲ್ಪಟ್ಟು ಅದರಿಂದುಂಟಾಗುವ ಖರ್ಚಿಗೂ ಸಹ ದೇಣೀದಾರರು ಗುರಿಯಾಗಲ್ಪಡುವರು.

ಹುತ್ತು ಇದರಿಂದ ಲೇಟ್ ಮೆ॥ ರಂಗಯ್ಯ ಹೆಬ್ಬಾರರ ಆಸ್ತಿಯಿಂದ ತಮಗೆ ಸಲ್ಲಬೇಕಾಗಿ ಹೇಳುವ ಸಾಲಗಾರರುಗಳಿಗೆ ಯಚ್ಚರಿಸುವದೇನಂದರೆ,—ತಮಗೆ ಬರಬೇಕೆಂಬ ಲೇಣಿ ತಪ್ಶೀಲ ಸಹಿತ ಈ ತಾರೀಖು ಲಾಗಾಯತು ಮೂರು ತಿಂಗಳುಗಳ ಒಳಗಾಗಿ ಅಂಥಾ

ಲೇಣಿಗಳ ತನಿಖೆಯಿಂದ ಕ್ರಮವರಿತು ವಿಲೇವಾರಿ ಮಾಡುವಗೋಸ್ಕರ ನಮ್ಮಲ್ಲಿಗಾಗಲಿ ಅಥವಾ ನಮ್ಮ ಲೀಗಲ್ ಅಡ್ವೈಸರ್ ಆದ ಮೈಸೂರು ಚೀಫ್ ಕೋರ್ಟು ಅಡ್ವೋಕೇಟರಾಗಿರುವ ಹೈದರಾಬಾದ್ ಎಸ್. ಎಸ್. ರಾಮಸ್ವಾಮಿ ಅಯ್ಯಂಗಾರ್ ಇವರಲ್ಲಿಗಾಗಲಿ ತಿಳಿಯ ಪಡಿಸಬೇಕು. ಈ ಪ್ರಕಾರ ಮಾಡದೇನೆ ವೃಥಾ ಕೋರ್ಟಿಗೆ ಹೋಗುವದೇ ಆದರೆ ಅಂಥಾ ವ್ಯವಹರಣೆಗಳಿಂದ ವಾದಿಗಳಿಗೆ ಉಂಟಾಗುವ ಖರ್ಚಿಗೆ ಮೈನರನಾಗಲಿ ಮೈನರಿನ ಆಸ್ತಿಯೇ ಆಗಲಿ ಜವಾಬ್ದಾರಿಯಾಗಲಾರದಲ್ಲದೆ ಇಂಥಾ ವ್ಯಾಜ್ಯಗಳಲ್ಲಿ ಪ್ರತ್ತರವಾದ ಮಾಡುವ ಗ್ರೋಸ್ಕರ ಮೈನರನಿಗಾಗಲಿ ಆತನ ಆಸ್ತಿಗಾಗಲಿ ತಗಲುವ ಯಲ್ಲಾ ನಷ್ಟಗಳನ್ನೂ ವಾದಿಗಳಿಂದ ಬರವಾಡಿಕೊಳ್ಳುವದರಲ್ಲಿ ಬಂದೀತು.

ಅಂ. ಸಾವಿತ್ರಿಅಮ್ಮ,
ಲೇಟ್ ಮೆ॥ ರಂಗಯ್ಯ ಹೆಬ್ಬಾರರಮಗ ಮೈನರ್,
ಜಯಗಣಪತಿ ಹೆಬ್ಬಾರನ ಗಾರ್ಡಿಯರ್ ಮತ್ತು ಮ್ಯಾನೇಜರ್.

ಅಂಬಿನಕ್ಕೋಡಿಗೆ
ತಾರೀಖು 31—12—95ನೇ ಇಸವಿ.

MYSORE GOVERNMENT CENTRAL PRESS, BANGALORE—1896.